# ಪ್ರಾರ್ಥನೆ

## ಯಮುನಾಷ್ಟಕಮ್ - ೨

**ನವಜಲದದ್ಯುತಿಕೋಟಿಲಸತ್ತನುಹೇಮಭಯಾಭರರಂಜಿತಕೇ**
**ತಡಿದವಹೇಲಿಪದಾಂಚಲಚಂಚಲಶೋಭಿತಪೀತಸುಚೇಲಧರೇ ।**
**ಮಣಿಮಯಭೂಷಣಚಿತ್ರಪಟಾಸನರಂಜಿತಗಂಜಿತಭಾನುಕರೇ**
**ಜಯ ಯಮುನೇ ಜಯ ಭೀತಿನಿವಾರಿಣಿ ಸಂಕಟನಾಶಿನಿ ಪಾವಯ ಮಾಮ್॥ ೫ ॥**

ಮೋಡಗಳ ಕಾಂತಿಯಿಂದ ಶೋಭಿಸುವ, ಸೂರ್ಯನಕಿರಣಗಳು ಬಿದ್ದಿರುವುದರಿಂದ ಹೊಳೆಯುತ್ತಿರುವ ವಿವಿಧವಾದ ಬಣ್ಣಗಳಿಂದ ಆಭರಣಗಳಿಲ್ಲದೆಯೂ ಅತಿಶಯವಾದ ಸೌಂದರ್ಯದಿಂದ ಕೂಡಿರುವ, ಮಿಂಚಿನ ಚಲನೆಯನ್ನೂ ಮೀರಿಸಿದ ಚಂಚಲವಾದ ಶ್ರೇಷ್ಠವಾದ ಪೀತಾಂಬರ ವಸ್ತ್ರದಿಂದ ಅಲಂಕೃತವಾದ ಹೆಜ್ಜೆಗಳುಳ್ಳ, ರತ್ನದ ಹಾಸುಗಳಿಂದ ಅಲಂಕೃತವಾದ ಅನೇಕ ಆಸನಗಳನ್ನು ಅಡಗಿಸಿಕೊಂಡಿರುವ, ಓ ಯಮುನೆ, ನಿನಗೆ ಜಯವಾಗಲಿ. ಭಯ ದೂರ ಮಾಡುವ ಸಂಕಟ ಪರಿಹರಿಸುವ ತಾಯೆ, ನನ್ನನ್ನು ಪಾವನಗೊಳಿಸು.

**ಶುಭಪುಲಿನೇ ಮಧುಮತ್ತಯದೂದ್ಭವರಾಸಮಹೋತ್ಸವಕೇಲಿಭರೇ**
**ಉಚ್ಚಕುಲಾಚಲರಾಜಿತಮೌಕ್ತಿಕಹಾರಮಯಾಭರರೋದಸಿಕೇ।**
**ನವಮಣಿಕೋಟಿಕಭಾಸ್ಕರಕಂಚುಕಿಶೋಭಿತತಾರಕಹಾರಯುತೇ**
**ಜಯ ಯಮುನೇ ಜಯ ಭೀತಿನಿವಾರಿಣಿ ಸಂಕಟನಾಶಿನಿ ಪಾವಯ ಮಾಮ್ ॥ ೬ ॥**

ನಿನ್ನ ಮಂಗಳಮಯವಾದ ಮರಳಿನಲ್ಲಿ ಕೃಷ್ಣನ ರಾಸಲೀಲಾ ಮಹೋತ್ಸವಕ್ಕೆ ಅನುವುಮಾಡಿಕೊಟ್ಟು ಮಹಾಮಹಿಮಳೆನಿಸಿರುವೆ. ಉತ್ತುಂಗವಾದ ಕುಲಪರ್ವತದ ಶಿಖರಗಳನ್ನೇ ಮುತ್ತಿನ ಹಾರವಾಗಿ ಹೊಂದಿ ಆಕಾಶವನ್ನು ತುಂಬಿರುವೆ, ನವರತ್ನಗಳ ಹೊಳಪಿನ ಕಂಚುಕವನ್ನೂ ಮುತ್ತಿನಹಾರವನ್ನೂ ಧರಿಸಿರುವ ಓ ಯಮುನೆ, ಭಯವನ್ನು ದೂರಮಾಡುವ ಸಂಕಟಗಳನ್ನು ಹೋಗಲಾಡಿಸುವ ನಿನಗೆ ಜಯವಾಗಲಿ. ನನ್ನನ್ನು ಪವಿತ್ರನನ್ನಾಗಿ ಮಾಡು.

**ಕರಿವರಮೌಕ್ತಿಕನಾಸಿಕಭೂಷಣವಾತಚಮತ್ಕೃತಚಂಚಲಕೇ**
**ಮುಖಕಮಲಾಮಲಸೌರಭಚಂಚಲಮತ್ತಮಧುವ್ರತಲೋಚನಿಕೇ ।**
**ಮಣಿಗಣಕುಂಡಲಲೋಲಪರಿಸ್ಫುರದಾಕುಲಗಂಡಯುಗಾಮಲಕೇ**
**ಜಯ ಯಮುನೇ ಜಯ ಭೀತಿನಿವಾರಿಣಿ ಸಂಕಟನಾಶಿನಿ ಪಾವಯ ಮಾಮ್ ॥ ೭ ॥**

ಶ್ರೇಷ್ಠವಾದ ಆನೆಯ ಕುಂಭಸ್ಥಳದ ಮುತ್ತಿನ ಮೂಗುತಿಯನ್ನು ನೀನು ಧರಿಸಿರುವೆ, ಗಾಳಿಯಿಂದ ಚಂಚಲವಾದ ಅಲೆಗಳನ್ನು ಹೊಂದಿರುವೆ. ನಿನ್ನ ಮುಖದಿಂದ ಹೊರಸೂಸುತ್ತಿರುವ ಶುದ್ಧ ಪರಿಮಳದ ಆಕರ್ಷಣೆಗೆ ಮದಿಸಿದ ದುಂಬಿಗಳಂತೆ ಅತ್ತಿತ್ತ ಚಲಿಸುತ್ತಿರುವ ಕಣ್ಣುಗಳು ನಿನ್ನವು. ಮಣಿಸಮೂಹದಿಂದ ರಚಿತವಾದ ತೂಗಾಡುತ್ತಿರುವ ಆಭರಣಗಳನ್ನು ಕಿವಿಯಲ್ಲಿ ಧರಿಸಿರುವೆ. ಅವುಗಳಿಂದ ಹೊರಹೊಮ್ಮುವ ಕಿರಣಗಳು ನಿನ್ನ ಕೆನ್ನೆಯನ್ನು ಅಲಂಕರಿಸಿವೆ. ಓ ತಾಯೆ ಯಮುನೆ, ನನ್ನ ಕಲ್ಮಷಗಳನ್ನು ದೂರಮಾಡು, ಭಯ, ಸಂಕಟಗಳನ್ನು ಪರಿಹರಿಸುವ ನಿನಗೆ ಜಯವಾಗಲಿ.

**ಕಲರವನೂಪುರಹೇಮಮಯಾಚಿತಪಾದಸರೋರುಹಸಾರುಣಿಕೇ**
**ಧಿಮಿಧಿಮಿಧಿಮಿಧಿಮಿತಾಲವಿನೋದಿತಮಾನಸಮಂಜುಲ ಪಾದಗತೇ।**
**ತವ ಪದಪಂಕಜಮಾಶ್ರಿತಮಾನವಚಿತ್ತಸದಾಖಿಲತಾಪಹರೇ**
**ಜಯ ಯಮುನೇ ಜಯ ಭೀತಿನಿವಾರಿಣಿ ಸಂಕಟನಾಶಿನಿ ಪಾವಯ ಮಾಮ್ ॥ ೮ ॥**

ಝಣಝಣ ಎಂದು ಮಂಜುಳನಾದ ಮಾಡುತ್ತಿರುವ ಕಾಲುಗೆಜ್ಜೆಗಳಿಂದ ಅಲಂಕೃತವಾಗಿರುವ ಕಮಲದಂತೆ ಕೆಂಪಾದ ಪಾದಗಳನ್ನು ಹೊಂದಿರುವೆ, ಧಿಮಿ ಧಿಮಿ ಧಿಮಿ ಧಿಮಿ ಎಂಬ ತಾಳಕ್ಕೆ ತಕ್ಕಂತೆ ಹೆಜ್ಜೆಯಿಟ್ಟು ಮಂಜುಳನಾದಗೈಯುತ್ತಿರುವೆ. ಪಾದವನ್ನು ಆಶ್ರಯಿಸಿದ ಮಾನವನ ಚಿತ್ತದ ತಾಪಗಳನ್ನೆಲ್ಲ ಸದಾ ದೂರ ಮಾಡುತ್ತಿರುವ ಯಮುನೆ, ನಿನಗೆ ಜಯವಾಗಲಿ. ಭಯನಿವಾರಿಣಿ, ಸಂಕಟಪರಿಹಾರಿಣಿ ಹೇ ಮಾತೆ, ನನ್ನನ್ನು ಪಾವನಗೊಳಿಸು.

— ಶ್ರೀ ಶಂಕರಾಚಾರ್ಯ

ಸೂಕ್ತಿಪ್ರಭ

## ಝೆನ್ ಸೂಕ್ತಿಗಳು

ಸಾಮಾನ್ಯ ಮನುಷ್ಯನಿಗೆ ಜ್ಞಾನ ಬಂದಾಗ ಅವನು ಸಂತನಾಗುತ್ತಾನೆ. ಸಂತನಿಗೆ ಅರಿವು ಬಂದಾಗ ಅವನು ಸಾಮಾನ್ಯ ಮನುಷ್ಯನಾಗುತ್ತಾನೆ.

— ಅಜ್ಞಾತ

ಸತ್ಯವನ್ನು ಅನುಭವಿಸದೆ, ಅದರ ಕೆಲವು ಭಾವನೆಗಳನ್ನು ಮಾತ್ರ ಸ್ವೀಕರಿಸುವುದೆಂದರೆ, ಕಾಗದದ ಮೇಲೆ ಕೇಕ್ ಚಿತ್ರವನ್ನು ಬರೆದಂತೆ, ಅದನ್ನು ತಿನ್ನಲಾಗದು.

— ಸುಜುಕಿ ರೋಶಿ

ಅರಸುವುದೆಂದರೆ ದುಃಖ. ಏನನ್ನೂ ಅರಸದಿರುವುದೇ ಆನಂದ.

— ಬೋಧಿಧರ್ಮ

ನೀನು ಏನನ್ನಾದರೂ ಮಾಡುವುದಿದ್ದರೆ, ಅದರಲ್ಲಿ ನಿನ್ನನ್ನು ನೀನು ಸಂಪೂರ್ಣ ಸುಟ್ಟುಬಿಡಬೇಕು, ಒಳ್ಳೆಯ ಧುನಿ ಹಾಕಿದಂತೆ. ಅಲ್ಲಿ ನೀನು ಸ್ವಲ್ಪವೂ ಉಳಿಯಬಾರದು.

— ಶೂನ್ರ್ಯು ಸುಜುಕಿ

ನಾನು ಎಲ್ಲಿಗೆ ಹೋಗುತ್ತಿರುವೆ ಎಂದು ನೀನು ಕೇಳಬೇಡ. ಏಕೆಂದರೆ, ಅನಂತ ಪ್ರಪಂಚದಲ್ಲಿ ನಾನು ಪ್ರಯಾಣ ಮಾಡುತ್ತಿರುವೆ, ನಾನು ಇಡುವ ಒಂದೊಂದು ಹೆಜ್ಜೆಯೂ ನನ್ನ ಮನೆಯೇ.

— ದೋಜೆನ್

ನಿನ್ನ ಮನಸ್ಸು ಯಾವುದೋ ವಸ್ತುವಿನ ಬೆನ್ನಟ್ಟಿ ಹೋಗುವುದನ್ನು ನಿಲ್ಲಿಸು. ಆ ವಸ್ತು ಎಂದಿಗೂ ಕಳೆದುಹೋಗಿಲ್ಲ.

— ರಿಂಜಾಯ್ ಗಿಗೆನ್